# ಶ್ರೀರಾಮಕೃಷ್ಣ ಪರಮಹಂಸಗುರೋಃ ಅಷ್ಟಕಮ್

## ಶ್ರೀರಾಮಕೃಷ್ಣ ಪರಮಹಂಸ ಗುರುಗಳ ಸ್ತುತಿ

ವಿದ್ವಾನ್ ಮಹಾಬಲೇಶ್ವರ ಶಾಸ್ತ್ರೀ

**ರಾಮಕೃಷ್ಣಪರಮಹಂಸ ಯೋಗಿರಾಣ್ಣಮೋಽಸ್ತು ತೇ |**
**ಸರ್ವಧರ್ಮಮಾರ್ಗಗಮ್ಯ ಸತ್ಯದರ್ಶಕಾಯ ತೇ ||**

ಈ ವಿಶ್ವದ ಎಲ್ಲ ಧರ್ಮಮಾರ್ಗಗಳಿಂದಲೂ ಆಗುವ ಭಗವತ್ಸಾಕ್ಷಾತ್ಕಾರ ಒಂದೇ ಎಂಬ ಸತ್ಯದರ್ಶನವನ್ನು ಜಗತ್ತಿಗೆ ನೀಡಿದ ಯೋಗಿರಾಜರಾದ ಶ್ರೀರಾಮಕೃಷ್ಣ ಪರಮಹಂಸ ಗುರು ಪುಂಗವರೇ ನಿಮಗೆ ನಮಸ್ಕಾರವು.

**ಕಾಳಿಕಾಂಬಿಕಾಸುದಿವ್ಯ-ದರ್ಶನಪ್ರತೋಷಿಣೇ |**
**ಸರ್ವಭಾವನಿಷ್ಠಸರ್ವಸತ್ಯಸಾಕ್ಷಿರೂಪಿಣೇ ||**

ಕಾಳಿಕಾಂಬೆಯ ದಿವ್ಯದರ್ಶನವನ್ನು ಪಡೆದುಸಂತೋಷ ಪಟ್ಟವರೂ ಈ ಪ್ರಪಂಚದ ಎಲ್ಲ ಭಾವಗಳ ಹಿಂದಿರುವ ಸತ್ಯ ಒಂದೇ ಎಂದು ತಮ್ಮ ಅನುಷ್ಠಾನದ ಅನುಭವದಿಂದ ಜಗತ್ತಿಗೆ ತೋರಿಸಿದವರೂ ಆದ ಶ್ರೀರಾಮಕೃಷ್ಣ ಪರಮಹಂಸ ಗುರು ಪುಂಗವರೇ ನಿಮಗೆ ನಮಸ್ಕಾರವು .

**ವಿಶ್ವವಂದ್ಯಶಿಷ್ಯಸೇವ್ಯ-ಪಾದಪಂಕಜಾಯ ತೇ |**
**ಸರ್ವಧರ್ಮಸೋದರತ್ವ-ಭಾವಬೋಧಕಾಯ ತೇ||**

ವಿಶ್ವವಂದಿತರಾದ ಶಿಷ್ಯರಿಂದ ಸೇವಿಸಲ್ಪಟ್ಟ ಪದಕಮಲ ಉಳ್ಳವರೂ ಎಲ್ಲ ಧರ್ಮಗಳೂ ಸೋದರ ಧರ್ಮಗಳು ಎಂಬ ಭಾವನೆಯನ್ನು ಜಗತ್ತಿಗೆ ನೀಡಿದವರೂ ಆದ ಶ್ರೀರಾಮಕೃಷ್ಣ ಪರಮಹಂಸ ಗುರುಪುಂಗವರೇ ನಿಮಗೆ ನಮಸ್ಕಾರವು.

**ಸಗುಣನಿರ್ಗುಣೋಭಯತ್ವ-ದಿವ್ಯದರ್ಶನಪ್ರದೇ |**
**ಭಗವದೀಕ್ಷಣೇ ವಿಭಿನ್ನ-ಮಾರ್ಗಮಾತ್ರದರ್ಶಿನೇ ||**

ಸಗುಣೋಪಾಸನೆ ಹಾಗೂ ನಿರ್ಗುಣೋಪಾಸನೆ ಇವೆರಡೂ ಭಗವಂತನ ದಿವ್ಯದರ್ಶನವನ್ನು ಒದಗಿಸಿ ಕೊಡುವುವು. ಇವುಗಳು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ವಿಭಿನ್ನ ಮಾರ್ಗಗಳು ಮಾತ್ರ ಎಂದು ಸಾರಿದ ಶ್ರೀರಾಮಕೃಷ್ಣ ಪರಮಹಂಸ ಗುರುಪುಂಗವರೇ ನಿಮಗೆ ನಮಸ್ಕಾರವು.

**ವಿಶ್ವಮಾನ್ಯ-ಧರ್ಮಬೋಧ-ರೂಪದೇಹಧಾರಿಣೇ |**
**ವಿಶ್ವನಿಷ್ಠಮಾನವೌಘ-ಧರ್ಮಮಾರ್ಗದರ್ಶಿನೇ ||**

ವಿಶ್ವಕ್ಕೆ ಮಾನ್ಯವಾಗುವ ಧರ್ಮದ ಬೋಧನೆಗಳೇ ದೇಹಧಾರಿ ಯಾಗಿ ಧರೆಗೆ ಬಂದಂತಿರುವವರೂ ವಿಶ್ವದಲ್ಲಿರುವ ಸಮಸ್ತ ಮಾನವರಿಗೂ ಧರ್ಮಮಾರ್ಗಪ್ರದರ್ಶಕರೂ ಆದ ಶ್ರೀರಾಮಕೃಷ್ಣ ಪರಮಹಂಸ ಗುರುಪುಂಗವರೇ ನಿಮಗೆ ನಮಸ್ಕಾರವು.

**ಕಾಮಕಾಂಚನೋಭಯಂ ಚ ವರ್ಜನಪ್ರದಾಯ ತೇ |**
**ಸರ್ವಕಾಲ ದಿವ್ಯಭಾವ ಪೂರ್ಣನಿಶ್ಚಲಾಯ ತೇ ||**



ಬೇಲೂರು ಮಠದಲ್ಲಿರುವ ಶ್ರೀರಾಮಕೃಷ್ಣರ ಮೂರ್ತಿ

ಕಾಮ ಹಾಗೂ ಕಾಂಚನ ಇವೆರಡನ್ನು ತ್ಯಜಿಸಿದವರೂ ಸರ್ವ ಕಾಲದಲ್ಲಿಯೂ ದಿವ್ಯಭಾವ ಪರಿಪೂರ್ಣರೂ, ನಿಶ್ಚಲರೂ ಆಗಿರುವ ಶ್ರೀರಾಮಕೃಷ್ಣ ಪರಮಹಂಸ ಗುರುಪುಂಗವರೇ ನಿಮಗೆ ನಮಸ್ಕಾರವು.

**ನಿತ್ಯಸತ್ಯದರ್ಶನಾಯ ಶಿಷ್ಯಚಿತ್ತಹಾರಿಣೇ |**
**ಶಿಷ್ಯಮಸ್ತಕ-ಸ್ವಹಸ್ತ-ದತ್ತಜ್ಞಾನಸಂಪದೇ ||**

ದಿವ್ಯ ಸತ್ಯವನ್ನು ತೋರಿಸಿಕೊಡುವ ಸಲುವಾಗಿಯೆ ಶಿಷ್ಯರ ಚಿತ್ತ ವನ್ನು ಅಪಹರಿಸಿದವರೂ, ಶಿಷ್ಯರ (ಸ್ವಾಮಿ ವಿವೇಕಾನಂದರ) ತಲೆಯ ಮೇಲೆ ಕೈ ಇಡುವಿಕೆಯಿಂದಲೇ ಜ್ಞಾನಸಂಪತ್ತನ್ನು ಅನುಗ್ರಹಿಸಿದವರೂ ಆದ ಯೋಗಿರಾಜರಾದ ಶ್ರೀರಾಮಕೃಷ್ಣ ಪರಮಹಂಸ ಗುರು ಪುಂಗವರೇ ನಿಮಗೆ ನಮಸ್ಕಾರವು.

**ಭೇದಭಾವವರ್ಜಿತಾಯ ದಿವ್ಯಮಾರ್ಗದರ್ಶಿನೇ|**
**ಮರ್ತ್ಯಲೋಕಪಾವನಾಯ ತೇ ನಮೋಽಸ್ತು ತೇ ಸದಾ ||**

ಭೇದಭಾವವಿಲ್ಲದವರೂ, ದಿವ್ಯಮಾರ್ಗಪ್ರದರ್ಶಕರೂ ಭೂ ಲೋಕವನ್ನು ಪಾವನಗೊಳಿಸುವುದಕ್ಕಾಗಿಯೇ ಅವತರಿಸಿದವರೂ ಆದ ಯೋಗಿರಾಜರಾದ ಶ್ರೀರಾಮಕೃಷ್ಣ ಪರಮಹಂಸ ಗುರುಪುಂಗವರೇ ನಿಮಗೆ ನಮಸ್ಕಾರವು.

**ರಾಮಕೃಷ್ಣ ಪರಮಹಂಸ ಸದ್ಗುರೋಶ್ಚಭಾಷ್ಟಕಮ್|**
**ಯೇ ಪಠಂತಿ ಭಕ್ತಿಭಾವಯುಕ್ತ ಮಾನವಾಸ್ಸದಾ ||**
**ರಾಮಕೃಷ್ಣ ಪರಮಹಂಸ ಸದ್ಗುರೋಃ ಕೃಪಾಬಲಾತ್|**
**ತೇ ಭವಾಂಬುಧಿಂ ತರಂತಿ ಜ್ಞಾನಸುಪ್ಲವೇ ಸ್ಥಿತಾಃ ||**

ಯಾವ ಮಾನವರು ಭಕ್ತಿಭಾವವುಳ್ಳವರಾಗಿ ಶ್ರೀರಾಮಕೃಷ್ಣ ಪರಮಹಂಸ ಸದ್ಗುರುಗಳ ಈ ಶುಭ (ಅಷ್ಟಕವನ್ನು) ಸ್ತುತಿಯನ್ನು ಸದಾಕಾಲ ಪಠಿಸುವರೋ ಅವರು ಶ್ರೀರಾಮಕೃಷ್ಣ ಪರಮಹಂಸ ಸದ್ಗುರುಗಳ ಕೃಪಾವಿಶೇಷಕ್ಕೆ ಭಾಜನರಾಗಿ ಜ್ಞಾನವೆಂಬ ಸುಂದರವಾದ ಹಡಗಿನಲ್ಲಿ ಕುಳಿತು ಸುಖವಾಗಿ ಈ ಭವಸಮುದ್ರವನ್ನು ದಾಟುತ್ತಾರೆ. ॐ